

ಹಲವಾರು ಚಳವಳಿಗಳಲ್ಲಿ ತೊಡಗಿಕೊಂಡಿದ್ದ ಅವಳಿಗೆ ಆ ಚಳವಳಿಗಳು ಇತ್ತ ಆತ್ಮವಿಶ್ವಾಸದಿಂದ ಈ ನಯನಾಜೂಕನ್ನು ತಮಾಷೆಯೆನ್ನುವಂತೆ ನೋಡಲು ಸಾಧ್ಯವಾಗುತ್ತಿತ್ತು. ಈ ಮೂರು ಜನ ಹೋಗುತ್ತಿದ್ದ, ಆ ಪಾಶ್ ಎನ್ನುವಂತಹ ಜಿಮ್‌ಗೆ ಅವಳು ಸೇರಲು ಒಂದೇ ಕಾರಣ, ಅವಳ ಸಂಸ್ಥೆ ಇದರ ಮೀಡಿಯಾ ಪಾರ್ಟ್‌ನರ್ ಆಗಿದ್ದು. ಆ ಕಾರಣದಿಂದ ಇವಳಿಗೆ ಫ್ರೀ ಪಾಸ್ ಸಿಕ್ಕಿತ್ತು. ಈ ಗುಂಪಿನಲ್ಲಿ ಎಲ್ಲರಿಗಿಂತ ಚಿಕ್ಕವಳಾಗಿದ್ದ ಅವಳ ಬಗ್ಗೆ ಎಲ್ಲರಿಗೂ ಮೆಚ್ಚುಗೆ, ಪ್ರೀತಿ. ಪಟಪಟನೆ ಮತ್ತೆ ನಾಲ್ಕು ಗ್ಲಾಸ್ ರೆಡಿ ಮಾಡಿಕೊಂಡು ಬಂದವಳ ಕೈಯಿಂದ ಒಂದು ಗ್ಲಾಸ್ ತೆಗೆದುಕೊಂಡ ಸಾವನಿ, ಮಧುವಂತಿಯನ್ನು ನೋಡಿ ಈ ಹೆಣ್ಣು ತನ್ನ ಪಾಲಿನ ಅದೃಷ್ಟವನ್ನು ತಾನೇ ಕೂತು ಬರೆಸಿಕೊಂಡು ಬಂದಿದ್ದಾಳೆ ಎಂದು ನೂರನೆಯ ಸಲ ಎಂದುಕೊಂಡಳು. ಹಾಕಿಕೊಂಡಿದ್ದ ಬ್ರಾಂಡೆಡ್ ಜೀನ್ಸ್, ಬಿಳಿ ಮಲ್‌ಮಲ್ ಟಾಪ್, ಫ್ಯಾಶನೆಬಲ್ ಆಗಿ ಕತ್ತರಿಸಿ, ಸೆಟ್ ಮಾಡಿದ್ದ ಹೆಗಲವರೆಗಿನ ತಲೆಗೂದಲು ಕಪ್ಪು ಮೋಡದಂತೆ ಅವಳ ಮುಖವನ್ನು ಆವರಿಸಿಕೊಂಡಿತ್ತು. ಆರೋಗ್ಯವಂತವಾಗಿ ಮಿರಿಮಿರಿ ಮಿಂಚುವ ಒಂದೂ ಮೊಡವೆಯ ಕಲೆ ಇಲ್ಲದ ಮುಖ, ಕಿವಿ, ಕೈಗಳಲ್ಲಿ ಮಿಂಚನ್ನು ಖೈದು ಮಾಡಿಟ್ಟಂತಹ ವಜ್ರಗಳು, ಅವಳ ಲಿಪ್‌ಸ್ಟಿಕ್, ಪರ್ಫ್ಯೂಮ್ ಎಲ್ಲವೂ ಅವಳಿಗೆ ಹೇಳಿ ಮಾಡಿಸಿದಂತೆ ಒಪ್ಪುತ್ತಿದ್ದವು. ಗಂಡನಿಗೆ ಒಳ್ಳೆಯ ಕೆಲಸ, ಮುದ್ದಾದ ಮಗು, ಇವಳ ಸಂಬಳ ಸವಲತ್ತು... ಒಬ್ಬ ವ್ಯಕ್ತಿಗೆ ಇಷ್ಟೆಲ್ಲಾ ಕೂಡಿಬರಲು ಹೇಗೆ ಸಾಧ್ಯ ಎಂದು ಅವಳ ನಗುವನ್ನು ಕಂಡಾಗಲೆಲ್ಲಾ ಸಾವನಿಗೆ ಅನ್ನಿಸುತ್ತಿತ್ತು. ಆದ್ದರಿಂದಲೇ ಅವಳಿಗೆ ಅಷ್ಟು ಆತ್ಮವಿಶ್ವಾಸ, ಯಾವುದೇ ಗುಂಪಿನಲ್ಲಿ ಯಾರೂ ಹೇಳದೆಯೇ ಅವಳು ನಾಯಕಿಯಾಗಿಬಿಡುತ್ತಾಳೆ ಎನ್ನುವ ತೀರ್ಮಾನಕ್ಕೆ ಬಂದಿದ್ದಳು. ಅವಳ ಮೃದುವಾದ, ಮ್ಯಾನಿಕ್ಯೂರ್ ಮಾಡಿಸಿದ್ದ ಕೈಗಳನ್ನು ನೋಡಿ ತನ್ನ ಕೈಗಳನ್ನು ನೋಡಿಕೊಂಡಳು. ರಾಜೀವ ಕಡೆಯದಾಗಿ ತನ್ನ